DECEMBER 02, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ಜನ ಜಾಗೃತಿ ಜಾಥಾ ಹಾಗೂ ವಿಶೇಷ ಉಪನ್ಯಾಸಗಳ ಮೂಲಕ, ವಿಶ್ವ ಏಡ್ಸ್ ಜಾಗೃತಿ ದಿನಾಚರಣೆ, ಅರ್ಥಪೂರ್ಣ ಆಚರಣೆ.
- ಲಾಸ್ ಏಂಜಲಿಸ್‌ನಲ್ಲಿ 2028ರ, ಒಲಿಂಪಿಕ್ಸ್ ಕ್ರೀಡಾಕೂಟ; ರಾಜ್ಯದ 60 ಜನ ಕ್ರೀಡಾಪಟುಗಳಿಗೆ, ವಿಶೇಷ ತರಬೇತಿ.
- ವಿಜಯನಗರದ ಚಿಂತ್ರಪಳ್ಳಿ ಕೆರೆಯಲ್ಲಿ, ಚಳಿಗಾಲದ, ವಿದೇಶಿ ವಲಸೆ ಹಕ್ಕಿಗಳ ಕಲರವ.
- ‘ಹಸಿರು ಭವಿಷ್ಯಕ್ಕಾಗಿ, ಸುಸ್ಥಿರ ಜೀವನ’, ಧ್ಯೇಯದೊಂದಿಗೆ, ಇಂದು ರಾಷ್ಟ್ರೀಯ ಮಾಲಿನ್ಯ ತಡೆ, ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

“ಎಚ್.ಐ.ವಿ. ಹಾಗೂ ಏಡ್ಸ್ ಹರಡುವಿಕೆಯನ್ನು ನಿಯಂತ್ರಿಸುವಲ್ಲಿರುವ, ಅಡೆತಡೆಗಳನ್ನು ಕೊನೆಗಾಣಿಸುವುದು” ಎಂಬ ಧ್ಯೇಯದೊಂದಿಗೆ, ಏಡ್ಸ್ ಜಾಗೃತಿ ದಿನಾಚರಣೆ, ರಾಜ್ಯದ ವಿವಿಧೆಡೆಗಳಲ್ಲಿ ಜನ ಜಾಗೃತಿ ಜಾಥಾ ಹಾಗೂ ವಿಶೇಷ ಉಪನ್ಯಾಸಗಳೊಂದಿಗೆ, ಅರ್ಥಪೂರ್ಣವಾಗಿ ಜರುಗಿತು. ವಿಶ್ವ ಏಡ್ಸ್ ದಿನಾಚರಣೆ ನಿಮಿತ್ತ, ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಆವರಣದ, ಜೆ.ಕೆ.ಗ್ರೌಂಡ್ಸ್ ಅಮೃತ ಮಹೋತ್ಸವ ಭವನದಲ್ಲಿ, ಕರ್ನಾಟಕ ಏಡ್ಸ್ ಪ್ರಿವೆನ್ಶನ್ ಸೊಸಾಯಿಟಿ, ಪ್ರಧಾನ ಕಾರ್ಯಕ್ರಮ ಆಯೋಜಿಸಿತ್ತು. ಯೋಜನಾ ನಿರ್ದೇಶಕಿ, ಪದ್ಮಾ ಬಸವಂತಪ್ಪ ಮಾತನಾಡಿ, ರಾಜ್ಯದಲ್ಲಿ 442 ಸಮಗ್ರ ಆಪ್ತ ಸಮಾಲೋಚನಾ ಘಟಕಗಳು ಹಾಗೂ ಪರೀಕ್ಷಾ ಕೇಂದ್ರಗಳಿವೆ. 94 ಆ್ಯಂಟಿ ರೆಟ್ರೋ ವೈರಲ್ ಥೆರಪಿ ಕೇಂದ್ರಗಳಿವೆ. ತಾಲೂಕು ಮಟ್ಟದ ಆಸ್ಪತ್ರೆ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, 290 ವೈರಲ್ ಥೆರಪಿ ಉಪ ಕೇಂದ್ರಗಳು, ಏಡ್ಸ್ ಹಾಗೂ ಎಚ್.ಐ.ವಿ. ಸೋಂಕಿತರಿಗೆ ಚಿಕಿತ್ಸೆ ಮತ್ತು ಆರೈಕೆ ಕೈಗೊಳ್ಳುತ್ತಿವೆ ಎಂದರು. ಧಾರವಾಡ ಜಿಲ್ಲೆಯಲ್ಲಿ, ಏಡ್ಸ್ ಪಾಸಿಟಿವಿಟಿ ದರ, ಶೇಕಡ 0 ದಶಾಂಶ 3–8 ರಷ್ಟಿದೆ.

ಇದನ್ನು ಶೂನ್ಯಕ್ಕೆ ಇಳಿಸಿ, ಜಿಲ್ಲೆಯನ್ನು ಏಡ್ಸ್ ಮುಕ್ತ ಗೊಳಿಸುವ ಗುರಿ ಇದೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವಿಶೇಷ ಪಾಲನೆ ಯೋಜನೆಯಡಿ, 2 ಸಾವಿರದ 37 ಮಕ್ಕಳಿಗೆ ಸೌಲಭ್ಯ ವಿತರಿಸಲಾಗಿದೆ ಎಂದರು. ಏಡ್ಸ್ ಜನಜಾಗೃತಿ ಜಾಥಾ ಕಾರ್ಯಕ್ರಮಕ್ಕೆ, ಗದಗ ಸರ್ಕಾರಿ ಹೆರಿಗೆ ಆಸ್ಪತ್ರೆಯಲ್ಲಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಸಿ.ಎಸ್. ಶಿವನಗೌಡ್ರ ಚಾಲನೆ ನೀಡಿದರು.

<><><>

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ, ಕಳೆದ ಸೆಪ್ಟೆಂಬರ್ ತಿಂಗಳಲ್ಲಿ, ಕೇಂದ್ರ ಸರ್ಕಾರ ಅನುಮೋದಿಸಿದೆ ಎಂದು, ಕೇಂದ್ರ ಇಂಧನ ಖಾತೆ, ರಾಜ್ಯ ಸಚಿವ ಶ್ರೀಪಾದ ಯಸ್ಸೋ ನಾಯಕ, ರಾಜ್ಯಸಭೆಗೆ ತಿಳಿಸಿದ್ದಾರೆ. ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ, ರಾಜ್ಯಸಭೆ ಸಂಸದ, ಈರಣ್ಣ ಕಡಾಡಿ ಅವರ ಪ್ರಶ್ನೆಗೆ ಸಚಿವರು ಉತ್ತರಿಸಿದರು. ಕೇಂದ್ರ ವಿದ್ಯುತ್ ಪ್ರಾಧಿಕಾರ–ಸಿ.ಇ.ಎ, ಕರ್ನಾಟಕ ವಿದ್ಯುತ್‌ಶಕ್ತಿ ನಿಗಮ ನಿಯಮಿತದ ಸಹಯೋಗದಲ್ಲಿ ಜಾರಿಗೊಳಿಸುತ್ತಿರುವ, 2 ಸಾವಿರ ಮೆಗಾ ವ್ಯಾಟ್ ಸಾಮರ್ಥ್ಯದ, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ, ಕೇಂದ್ರ ಅನುಮತಿಸಿದೆ, ಎಂದರು. 2 ದಶಾಂಶ 6 ಗಿಗಾವ್ಯಾಟ್, ನವೀಕರಿಸಬಹುದಾದ ಇಂಧನವನ್ನು ಸ್ಥಳಾಂತರಿಸಲು, ಅಂತಾರಾಜ್ಯ ಪ್ರಸರಣ ವ್ಯವಸ್ಥೆಯ ಯೋಜನೆಗಳು, ವಿವಿಧ ಅನುಷ್ಠಾನ ಹಂತಗಳಲ್ಲಿವೆ. ಹಸಿರು ಇಂಧನ ಕಾರಿಡಾರ್–3 ಯೋಜನೆಯಡಿ, 11 ದಶಾಂಶ 8–8 ಗಿಗಾವ್ಯಾಟ್ ಸೌರ ವಿದ್ಯುತ್ ಹಾಗೂ 7 ದಶಾಂಶ 1–3 ಗಿಗಾವ್ಯಾಟ್ ನಷ್ಟು ಪವನ ವಿದ್ಯುತ್ ಉತ್ಪಾದಿಸಲಾಗುತ್ತಿದೆ ಎಂದು, ಕೇಂದ್ರ ಸಚಿವ ನಾಯಕ ತಿಳಿಸಿದರು. ಬೆಳಗಾವಿ, ಗದಗ, ವಿಜಯನಗರ, ಬೀದರ ಹಾಗೂ ಕೊಪ್ಪಳ ಜಿಲ್ಲೆಗಳು, ಹಸಿರು ಇಂಧನ ಕಾರಿಡಾರ್–3 ಯೋಜನೆಯಡಿ, ಸ್ಥಾನ ಪಡೆದಿವೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, 2026 ರ ಏಪ್ರಿಲ್‌ನಲ್ಲಿ, ಅಮರಗೋಳದ, ಕೃಷಿ ಉತ್ಪನ್ನ ಹುಟ್ಟುವಳಿ ಮಾರಾಟ ಮಂಡಳಿಯ ಮಾರುಕಟ್ಟೆಯ, ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರದಲ್ಲಿ, ಇನ್ ಕಾಮೆಕ್ಸ್ ಆಯೋಜಿಸಲಿದೆ. ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ, ಜಿ.ಕೆ. ಆದಪ್ಪ ಗೌಡರ ಮಾಹಿತಿ ನೀಡಿ, ಹೊಸ ದಿಲ್ಲಿಯಲ್ಲಿ, ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಹಾಗೂ ಬೃಹತ್ ಕೈಗಾರಿಕೆಗಳ ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ, ಚರ್ಚಿಸಿದ್ದಾಗಿ, ತಿಳಿಸಿದರು. ರಾಜ್ಯ ಕೈಗಾರಿಕಾ ವಲಯದ ವಿಸ್ತರಣೆ, ನವೀನ ತಂತ್ರಜ್ಞಾನಗಳ ಪ್ರದರ್ಶನ, ಹೂಡಿಕೆ ಅವಕಾಶಗಳ ವೃದ್ಧಿ ಹಾಗೂ ಉದ್ಯಮ ಸ್ನೇಹಿ ವಾತಾವರಣ ನಿರ್ಮಾಣಕ್ಕೆ ಕೈಗಾರಿಕೆ ವಸ್ತು ಪ್ರದರ್ಶನ–ಇನ್ ಕಾಮೆಕ್ಸ್ ಮಹತ್ತರ ಪಾತ್ರ ವಹಿಸಲಿದೆ ಎಂದು, ಅವರು ಹೇಳಿದರು.

<><><>

ವಿಜಯನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲೂಕು, ಚಿಂತ್ರಪಳ್ಳಿ ಗ್ರಾಮದ ಕೆರೆಗೆ, ಪ್ರಥಮ ಬಾರಿಗೆ, ಯುರೋಪ್ ದಿಂದ, ರೋಸಿ ಸ್ಟಾರ್ಲಿಂಗ್ ಪಕ್ಷಿಗಳು, ಲಕ್ಷಾಂತರ ಸಂಖ್ಯೆಯಲ್ಲಿ ಆಗಮಿಸಿದ್ದು, ಬಾನಂಗಳದಲ್ಲಿ ಹಾರಾಡಿ, ಚಿತ್ತಾರ ಮೂಡಿಸುತ್ತಿರುವುದು, ಪಕ್ಷಿ ಪ್ರೇಮಿಗಳ ಸಂತಸಕ್ಕೆ ಕಾರಣವಾಗಿದೆ. ರಾಜ್ಯದ ರಾಮ್‌ಸ್ಸಾರ್ ಜೌಗು ತಾಣ, ಹೊಸಪೇಟೆಯ ಅಂಕಸಮುದ್ರ ಪಕ್ಷಿಧಾಮಕ್ಕೆ ವಾಡಿಕೆಯಂತೆ, ಪ್ರತಿ ವರ್ಷ ಚಳಿಗಾಲ ಕಳೆಯಲು, ದೇಶ ವಿದೇಶಗಳಿಂದ, ನೂರಾರು ಪ್ರಭೇದದ ಅಪರೂಪದ ಹಕ್ಕಿಗಳು, ವಲಸೆ ಬರುತ್ತವೆ. ಚಿಂತ್ರಪಳ್ಳಿ ಕೆರೆಗೆ, ರೋಸಿ ಸ್ಟಾರ್ಲಿಂಗ್ ಹಕ್ಕಿಗಳು ಬಂದಿಳಿದ ಬಗ್ಗೆ, ಮಾಹಿತಿ ನೀಡಿದ್ದಾರೆ, ಪಕ್ಷಿ ವೀಕ್ಷಕ ಕೆ. ಕೊಟ್ರೇಶ.

<><><>

ಕೆ.ಕೊಟ್ರೇಶ ಧ್ವನಿ 32 ಸೆಕೆಂದುಗಳು

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(56 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮನುಷ್ಯ ಪರಿಸರದ ಕೂಸು. ಮಕ್ಕಳ ಮನಸ್ಸಿನಲ್ಲಿ ಪರಿಸರದ ಬಗ್ಗೆ ಕಾಳಜಿ ಮೂಡಿಸಬೇಕು; ಪರಿಸರವನ್ನು ಒಲಿಸಿಕೊಂಡು, ಹಿತಮಿತವಾಗಿ ಬಳಸಬೇಕೇ ಹೊರತು, ಬಗ್ಗುಬಡಿದು ಮುಕ್ಕುವುದಲ್ಲ ಎಂದು, ಒಡಿಶಾ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ, ಕೃ ್ಣ ದೀಕ್ಷಿತ ಅಭಿಪ್ರಾಯಪಟ್ಟಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ನವನಗರದ, ಕರ್ನಾಟಕ ಕಾನೂನು ವಿಶ್ವವಿದ್ಯಾಲಯದಲ್ಲಿ, ವಾಯು ಮಾಲಿನ್ಯ ನಿಯಂತ್ರಣ ಜಾಗೃತಿ ಮಾಸಾಚರಣೆಯ, ಸಮಾರೋಪ ಸಮಾರಂಭದಲ್ಲಿ, ಅವರು ಮಾತನಾಡಿದರು. ವೃಕ್ಷ ಮಾತೆ ಸಾಲು ಮರದ ತಿಮಕ್ಕ ಅವರ, ಪರಿಸರ ಕಾಳಜಿಯನ್ನು ನ್ಯಾಯಮೂರ್ತಿ ದೀಕ್ಷಿತ ಸ್ಮರಿಸಿದರು.

<><><>

ಇಂದು ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನಾಚರಣೆ. ಭೋಪಾಲ ಅನಿಲ ದುರಂತದಲ್ಲಿ ಮಡಿದವರನ್ನು ಸ್ಮರಿಸಿ, ಶ್ರದ್ಧಾಸುಮನ ಅರ್ಪಿಸಲಾಗುತ್ತದೆ. ಕೈಗಾರಿಕೆಗಳು ಹಾಗೂ ವಾಹನಗಳಿಂದಾಗುವ ಮಾಲಿನ್ಯವನ್ನು ತಡೆಯುವ ಕುರಿತು ಜನಜಾಗೃತಿ ಮೂಡಿಸಲಾಗುತ್ತದೆ. 'ಹಸಿರು ಭವಿ ್ಯಕ್ಕಾಗಿ, ಸುಸ್ಥಿರ ಜೀವನ' – ಧ್ಯೇಯದೊಂದಿಗೆ, ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನ ಆಚರಿಸಲಾಗುತ್ತಿದ್ದು, ಉತ್ತರಕನ್ನಡ ಜಿಲ್ಲೆಯ, ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಚೇರಿ, ಪರಿಸರ ಅಧಿಕಾರಿ ಬಿ.ಕೆ ಸಂತೋ ್, ಮಾಹಿತಿ ನೀಡಿದ್ದಾರೆ.

<><><>

ಬಿ.ಕೆ ಸಂತೋಷ ಧ್ವನಿ 53 ಸೆಕೆಂದುಗಳು

<><><>

ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ, ಚಿನ್ನದ ಪದಕ ಗೆಲ್ಲುವ, ರಾಜ್ಯದ ಕ್ರೀಡಾಪಟುಗಳಿಗೆ, 6 ಕೋಟಿ ರೂಪಾಯಿ ನಗದು ಬಹುಮಾನ, ಸರ್ಕಾರಿ ಉದ್ಯೋಗ, ಬೆಳ್ಳಿ ಪದಕ ವಿಜೇತರಿಗೆ 4 ಕೋಟಿ ರೂಪಾಯಿ, ಕಂಚು ಪದಕ ವಿಜೇತರಿಗೆ 3 ಕೋಟಿ ರೂಪಾಯಿ ನಗದು ಬಹುಮಾನ ನೀಡಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರಿನಲ್ಲಿ ಆಯೋಜಿಸಿದ್ದ, 2022 ಮತ್ತು 2023ನೇ ಸಾಲಿನಲ್ಲಿ 30 ಜನ ಕ್ರೀಡಾಪಟುಗಳಿಗೆ, ಏಕಲವ್ಯ, 9 ಜನ ಕ್ರೀಡಾ ತರಬೇತುದಾರರಿಗೆ ಜೀವಮಾನ ಸಾಧನೆ ಪ್ರಶಸ್ತಿ ಹಾಗೂ 15 ಜನರಿಗೆ ಕರ್ನಾಟಕ ಕ್ರೀಡಾರತ್ನ ಸೇರಿದಂತೆ, 2023 ನೇ ಸಾಲಿನ, ಕರ್ನಾಟಕ ಕ್ರೀಡಾ ಪೋ ್ಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡು ಅವರು, ಮಾತನಾಡಿದರು.

2028ರ, ಜುಲೈ 14 ರಿಂದ 30ರ ವರೆಗೆ, ಲಾಸ್ ಏಂಜಲಿಸ್ ನಲ್ಲಿ ನಡೆಯಲಿರುವ, ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಿರುವ, ರಾಜ್ಯದ 60 ಕ್ರೀಡಾಪಟುಗಳಿಗೆ, ತಲಾ 10 ಲಕ್ಷ ರೂಪಾಯಿ ಮೊತ್ತವನ್ನು, ತರಬೇತಿ ಅವಧಿಯಲ್ಲಿಯೇ ನೀಡಲಾಗುತ್ತದೆ ಎಂದು, ಮುಖ್ಯಮಂತ್ರಿ ಪ್ರಕಟಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಜನ ಜಾಗೃತಿ ಜಾಥಾ ಹಾಗೂ ವಿಶೇಷ ಉಪನ್ಯಾಸಗಳ ಮೂಲಕ, ವಿಶ್ವ ಏಡ್ಸ್ ಜಾಗೃತಿ ದಿನಾಚರಣೆ, ಅರ್ಥಪೂರ್ಣ ಆಚರಣೆ.
- ಲಾಸ್ ಏಂಜಲಿಸ್‌ನಲ್ಲಿ 2028ರ, ಒಲಿಂಪಿಕ್ಸ್ ಕ್ರೀಡಾಕೂಟ; ರಾಜ್ಯದ 60 ಜನ ಕ್ರೀಡಾಪಟುಗಳಿಗೆ, ವಿಶೇಷ ತರಬೇತಿ.
- ವಿಜಯನಗರದ ಚಿಂತ್ರಪಳ್ಳಿ ಕೆರೆಯಲ್ಲಿ, ಚಳಿಗಾಲದ, ವಿದೇಶಿ ವಲಸೆ ಹಕ್ಕಿಗಳ ಕಲರವ.
- 'ಹಸಿರು ಭವಿಷ್ಯಕ್ಕಾಗಿ, ಸುಸ್ಥಿರ ಜೀವನ', ಧ್ಯೇಯದೊಂದಿಗೆ, ಇಂದು ರಾಷ್ಟ್ರೀಯ ಮಾಲಿನ್ಯ ತಡೆ, ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>